**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**

**ಹುಣಸೂರು.**

**ಸಿ.ಸಿ. ಸಂಖ್ಯೆ 287/2025**

**ಸಾಕ್ಷಿಯನ್ನು ದಿಃ 05.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲೋಲಾಕ್ಷಿ ಟಿ.ಎಸ್ | ಸಿಡಬ್ಲ್ಯೂಃ16 | ಪಿಡಬ್ಲ್ಯೂಃ7 |
| ಗಂಡನ ಹೆಸರು | ಡಾಃ ಶ್ರೀನಿವಾಸ್ ಯಾದವ್ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ ಲಶ್ಕರ್ ಪೊಲೀಸ್ ಠಾಣೆ,<br>ಮೈಸೂರು ನಗರ. | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 09.08.2023 ರಿಂದ ದಿಃ 06.06.2025 ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.01.2025 ರಂದು ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ಠಾಣಾ ಉಸ್ತುವಾರಿಯಲ್ಲಿದ್ದಾಗ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 1/2025 ರಲ್ಲಿ ಕಲಂ 281,106 ಬಿ.ಎನ್.ಎಸ್ ಸಹವಾಚಕ 187 ಐ.ಎಂ.ವಿ ಕಲಂ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಿಪಿ. 1 ರ ದೂರಿನಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ

ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ. 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 16(ಎ) ಎಂದು ಗುರುತಿಸಲಾಯಿತು.

ಅದೆ ದಿನ ಬೆಳಿಗ್ಗೆ 10.30 ರಿಂದ 1.00 ಗಂಟೆ ವರೆಗೆ ಶವ ತನಿಖಾ ವರದಿಯನ್ನು ಪಂಚರಾದ ಚಾಸಾ 8 ರಿಂದ 10 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಶವ ತನಿಖಾ ವರದಿಯನ್ನು ಈಗಾಗಲೆ ನಿಪಿ. 12 ಎಂದು ಆರೋಪಿಯ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ ಪಿ.ಎಂ. ವರದಿಯನ್ನು ಚಾಸಾ 13 ರವರಿಂದ ಪಡೆದಿರುತ್ತೇನೆ. ಅದನ್ನು ಈಗಾಗಲೆ ನಿಪಿ. 13 ಎಂದುಆರೋಪಿಯ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ ಮಧ್ಯಾಹ್ನ 3. ರಿಂದ 4 ಗಂಟೆ ವರೆಗೆ ಚಾಸಾ2 ರವರು ತೋರಿಸಿದ ಸ್ಥಳದಲ್ಲಿ ಚಾಸಾ 3 ಮತ್ತು 4 ರವರು ಸಮಕ್ಷಮಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸ್ಥಳ ಪಂಚನಾಮೆಯನ್ನು ಈಗಾಗಲೆ ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಸಿ) ಎಂದು ಗುರುತಿಸಲಾಯಿತು. ಅದೆ ದಿನ ಫೋಟೊವನ್ನು ತೆಗೆಸಿದ್ದು, ಸದರಿ ಫೋಟೊವನ್ನು ಈಗಾಗಲೆ ನಿಪಿ. 4 ಎಂದು ಗುರುತಿಸಲಾಯಿತು. ಅದೆ ದಿನ ಚಾಸಾ 1 ಮತ್ತು 2 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೆ ದಿನ ಸಂಜೆ 4.45 ರಿಂದ 5.30 ರ ವರೆಗೆ ಠಾಣಾ ಆವರಣದಲ್ಲಿ ಇದ್ದ ಕೆಎ 45 ಯು 9521 ನಂಬರ್ ನ ಹೀರೊ ಸ್ಲೆಂಡರ್ ಬೈಕ್ ಅನ್ನು ಚಾಸಾ 3 ಮತ್ತು 4 ರವರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ಈಗಾಗಲೆ ನಿಪಿ. 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 3(ಸಿ) ಎಂದು ಗುರುತಿಸಲಾಯಿತು.

ದಿಃ 20.01.2025 ರಂದು ಬೆಳಿಗ್ಗೆ 10.00 ರಿಂದ 10.45 ರವೆರೆಗೆ ಕೆಎ 09 ಎಎ 1670 ಅಶೋಾಕ್ ಲೈಲ್ಯಾಂಡ್ ವಾಹನವನ್ನು ಆರೋಪಿ ಮಂಚಪ್ಪ ರವರು ಠಾಣಾ ಆವರಣಕ್ಕೆ ಹಾಜರು ಪಡಿಸಿದ್ದು, ಚಾಸಾ 5 ಮತ್ತು 6 ರವರು ಸಮಕ್ಷಮ ಅಮಾನತ್ತು ಪಡಿಸಿರುತ್ತೇನೆ. ಸದರಿ ಅಮಾನತ್ತು ಮಹಜರ್ ಅನ್ನು ಈಗಾಗಲೆ

ನಿಪಿ. 14 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 14(ಸಿ) ಎಂದು ಗುರುತಿಸಲಾಯಿತು. ಅಮಾನತ್ತು ಮಹಜರ್ ಸಮಯದಲ್ಲಿ ಲಾರಿಯ ಪೊಾೋಟೊಗಳನ್ನು ತೆಗೆದಿದ್ದು, ಅವುಗಳನ್ನು ನೊಾೀಡಿ ಗುರುತಿಸಿರುತ್ತಾರೆ. ಸದರಿ ಪೋಟೊಗಳನ್ನು ಈಗಾಗಲೆ ನಿಪಿ. 10 ಮತ್ತು 11 ಎಂದು ಗುರುತಿಸಲಾಗಿದೆ.

ದಿಃ 22.01.2025 ರಂದು ಕೆಎ 09 ಎಎ 1670 ಅಶೋಕ್ ಲೈಲ್ಯಾಂಡ್ ವಾಹನದ ಮಾಲೀಕರಾದ ಚಾಸಾ 11 ರವರಿಗೆ ಐ..ಎಂ.ವಿ ಕಾಯಿದೆ ಕಲಂ 133 ಅಡಿ ನೊಟೀಸು ನೀಡಿ, ಉತ್ತರ ಪಡೆದಿರುತ್ತೇನೆ. ಸದರಿ ನೊಟೀಸು ಮತ್ತು ಉತ್ತರವನ್ನು ನಿಪಿ. 17 ಮತ್ತು 18 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ. 17(ಎ) ಮತ್ತು 18(ಎ) ಎಂದು ಗುರುತಿಸಲಾಯಿತು. ಅದೆ ದಿನ ಅವರಿಂದ ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಅನ್ನು ಅವರ ವಶಕ್ಕೆ ಬಿಡುಗಡೆ ಗೊಳಿಸಿರುತ್ತೇನೆ. ಸದರಿ ಇಂಡಿಮಿನಿಟಿ ಬಾಂಡ್ ಅನ್ನು ನಿಪಿ. 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಅದೆ ದಿನ ಆರೋಪಿಗೆ ಕಲಂ 35(1) ಬಿ.ಎನ್.ಎಸ್.ಎಸ್ ಅಡಿ ನೊಟೀಸು ನೀಡಿ ಜಾಮೀನು ಮೇಲೆ ಬಿಡುಗಡೆ ಗೊಳಿಸಿರುತ್ತೇನೆ.

ದಿಃ 28.02.2025 ರಂದು ಕೆಎ 45 ಯು 9521 ರ ವಾಹನದ ಮಾಲೀಕರಾದ ಚಾಸಾ 1 ರವರಿಂದ ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಗೊಳಿರಸಿತುತ್ತೇನೆ. ಸದರಿ ಇಂಡಿಮಿನಿಟಿ ಬಾಂಡ್ ಅನ್ನು ನಿಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ಅದೆ ದಿನ ಚಾಸಾ 12 ರವರಿಂದ ಐ.ಎಂ.ವಿ ವರದಿಯನ್ನು ಪಡೆದಿರುತ್ತೇನೆ. ಅದನ್ನು ಈಗಾಗಲೆ ನಿಪಿ. 15 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 15(ಬಿ) ಎಂದು ಗುರುತಿಸಲಾಯಿತು. ಈ ಕೇಸ್ ನ ತನಿಖಾ ಸಮಯದಲ್ಲಿ ತೆಗೆದ ಪೋಟೊಗಳ ಸಿಡಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ. 21 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದು, ಆರೋಪಿತನ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಆರೋಪಿತನ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿಯು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ಮುಂದೂಡಲು ಸಕಾರಣಗಳು ಇಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.